**ಪ್ರಧಾನ ನ್ಯಾಯಿಕ ದಂಡಾಧಿಕಾರಿ ಮತ್ತು ಜೆ.ಎಂ.ಎಫ್.ಸಿ. ನ್ಯಾಯಾಲಯ, ಮಾಗಡಿ**

**ಖಾಸಗಿ ಪ್ರಕರಣ ಸಂಖ್ಯೆ : 334 / 2025**

ಪ್ರಾಸಾ :- 01

| | |
|---|---|
| ಹೆಸರು | **ನರಸಿಂಹಮೂರ್ತಿ ವಿ.ಎಲ್** |
| ತಂದೆ ಹೆಸರು | **ಲಕ್ಷ್ಮೀನರಸಿಂಹ** |
| ವಯಸ್ಸು | **42** |
| ಉದ್ಯೋಗ | **ವಕೀಲರು** |
| ವಿಳಾಸ | **ಸ್ವಾಸರಾಯನಪಾಳ್ಯ, ಕಸಬಾ ಹೋಬಳಿ, ಮಾಗಡಿ ತಾಲ್ಲೂಕು.** |

**ದಿನಾಂಕಃ 20-11-2025 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.**

ಪಿರ್ಯಾದುದಾರ ಸ್ವಖುಷಿ ಹೇಳಿಕೆ :-

ದಿನಾಂಕಃ 30-07-2025 ರಂದು ಸುಮಾರು 1.30 ರ ಸಮಯದಲ್ಲಿ ಹೊಸಪೇಟೆ ರಸ್ತೆ, ಸರ್ಕಾರಿ ಹಿರಿಯ ಪ್ರಾಥಮಿಕ ಪಾಠಶಾಲೆ ಹತ್ತಿರ ಆರೋಪಿಗಳು ನನ್ನನ್ನು ಅಡ್ಡಗಟ್ಟಿ ಅವಾಚ್ಯ ಶಬ್ದಗಳಿಂದ ನಿಂದಿಸಿ, ನನ್ನ ವಕೀಲ ವೃತ್ತಿಯನ್ನು ಅವಮಾನ ಮಾಡಿ ನನ್ನ ಮೇಲೆ ಹಲ್ಲೆ ಮಾಡಿರುತ್ತಾರೆ. ನಂತರ ನಾನು ಅದೇ ದಿವಸ ಸುಮಾರು 5.15 ರ ಸಮಯದಲ್ಲಿ ಮಾಗಡಿ ಸರ್ಕಾರಿ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆದುಕೊಂಡಿರುತ್ತೇನೆ. ಎಂ.ಎಲ್.ಸಿ. ಯನ್ನು ಸಹ ಮಾಡಿಸಿರುತ್ತೇನೆ.

ನಂತರ ನಾನು ದಿನಾಂಕಃ 01-08-2025 ರಂದು ಮಾಗಡಿ ಪೋಲಿಸ್ ಠಾಣೆಯಲ್ಲಿ ದೂರನ್ನು ದಾಖಲಿಸಿರುತ್ತೇನೆ. ಮಾಗಡಿ ಪೋಲಿಸ್ ಠಾಣೆಯವರು ಯಾವುದೇ ಕ್ರಮ ಜರುಗಿಸದ ಕಾರಣ ದಿನಾಂಕಃ 06-08-2025 ರಂದು ಮಾನ್ಯ ಎಸ್.ಪಿ. ರಾಮನಗರ ರವರಿಗೆ ಮತ್ತೊಂದು ಪಿರ್ಯಾದಿಯನ್ನು ಆರೋಪಿಗಳ ವಿರುದ್ಧ ದಾಖಲಿಸಿರುತ್ತೇನೆ. ನಂತರ ದಿನಾಂಕಃ 11-08-2025 ರಂದು ಮಾಗಡಿ ಪೋಲಿಸ್ ಠಾಣೆಯ ಮಹಿಳಾ ಮುಖ್ಯಪೇದೆ ಶೈಲಜಾ ರವರು ನಾನು ದಿಃ 01-08-2025 ರಂದು ನೀಡಿದ ದೂರನ್ನು ಅಟೆಂಡ್ ಮಾಡಿದ್ದು ಆರೋಪಿಗಳನ್ನು ಠಾಣೆಗೆ ಕರೆಯಿಸಿ ನನ್ನ ದೂರಿಗೆ ಆರೋಪಿಯವರು ಸುಳ್ಳು ಹೇಳಿಕೆಯನ್ನು ಸೃಷ್ಟಿಸಿಕೊಂಡಿರುತ್ತಾರೆ. ಅದೇ ದಿನ ನನ್ನ ದೂರಿಗೆ ಹಿಂಬರಹವನ್ನು ನೀಡಿರುತ್ತಾರೆ. ನಂತರ ನಾನು ಮಾನ್ಯ ಎಸ್.ಪಿ. ರಾಮನಗರ ರವರಿಗೆ ದಿಃ 06-08-2025 ರಂದು ನೀಡಿದ ದೂರಿಗೆ ಸಂಬಂಧಿಸಿದಂತೆ ಮಾನ್ಯ ಎಸ್.ಪಿ.

ರಾಮನಗರ ರವರು ಸದರಿ ದೂರಿಗೆ ಸಂಬಂಧಿಸಿದಂತೆ ಯಾವುದೇ ಕ್ರಮ ವಹಿಸದಂತೆ ಆದೇಶ ನೀಡದಿದ್ದರು ಆರೋಪಿಗಳು  ಮಾಗಡಿ ಪೋಲಿಸ್ ಠಾಣೆಯ ಶೈಲಜಾ ಹಾಗೂ ಆರಕ್ಷಕ ನಿರೀಕ್ಷಕರೊಂದಿಗೆ ಷರೀಕ್ ಆಗಿ ದಿನಾಂಕಃ 11-08-2025 ರಂದು ಸಮುಚಿತ ಮಾರ್ಗದಲ್ಲಿ ಎಂಬ ತಲೆಬರಹದೊಂದಿಗೆ ಮಾನ್ಯ ಎಸ್.ಪಿ. ರಾಮನಗರ ರವರಿಗೆ ವಿಳಾಸ ಮಾಡಿ ಹಿಂದೆ ನೀಡಿದ ಸುಳ್ಳು ಹೇಳಿಕೆಗಳ ಆಧಾರದ ಮೇಲೆ ವಿಚಾರಣಾ ವರದಿಯನ್ನು ಆರೋಪಿಗಳು ಸೃಷ್ಠಿ ಮಾಡಿರುತ್ತಾರೆ.  ನಾನು ಮಾನ್ಯ ಎಸ್.ಪಿ. ರಾಮನಗರ ರವರಿಗೆ ನೀಡಿದ ದೂರನ್ನು ಮಾಹಿತಿ ಹಕ್ಕಿನ ಅಡಿಯಲ್ಲಿ ಯಾವ ಕ್ರಮ ಕೈಗೊಂಡಿರುತ್ತೀರಿ ಎಂದು ಕೇಳಲಾಗಿದ್ದು ಸದರಿ ಮಾನ್ಯ ಎಸ್.ಪಿ. ರಾಮನಗರ ಕಚೇರಿಯವರು ದಿಃ 22-08-2025 ರಂದು ಡಿ.ವೈ.ಎಸ್.ಪಿ. ತಾವರೆಕೆರೆ ಮುಂದಿನ ಕ್ರಮಕ್ಕಾಗಿ ರವಾನಿಸಿರುತ್ತೇವೆಂದು ಮಾಹಿತಿ ನೀಡಿರುತ್ತಾರೆ.  ನಂತರ ನಾನು ಡಿ.ವೈ.ಎಸ್.ಪಿ. ತಾವರೆಕೆರೆ ರವರಿಗೆ ಸದರಿ ಮಾನ್ಯ ಎಸ್.ಪಿ. ರಾಮನಗರ ಇವರ ಮಾಹಿತಿ ಮೇರೇಗೆ ಮತ್ತೊಂದು ಮಾಹಿತಿ ಹಕ್ಕಿನಡಿಯಲ್ಲಿ ಮಾಹಿತಿ ಕೇಳಿದ್ದು ಸದರಿ ಡಿ.ವೈ.ಎಸ್.ಪಿ. ತಾವರೆಕೆರೆ ರವರು ದಿನಾಂಕಃ 28-08-2025 ರಂದು ಮಾಗಡಿ ಪೋಲಿಸ್ ಠಾಣೆಗೆ ವಿಚಾರಣೆ ಮಾಡುವಂತೆ ಕ್ರಮ ವಹಿಸಿ ಆದೇಶ ಮಾಡಿರುತ್ತಾರೆ.

ನಂತರ ನಾನು ಮಾಗಡಿ ಪೋಲಿಸ್ ಠಾಣೆಗೆ ಮಾನ್ಯ ಡಿ.ವೈ.ಎಸ್.ಪಿ. ತಾವರೆಕೆರೆ ರವರ ಮಾಹಿತಿ ಮೇರೆಗೆ ಮತ್ತೊಂದು ಮಾಹಿತಿ ಅರ್ಜಿಯನ್ನು ನೀಡಿದ್ದು ಮಾನ್ಯ ಎಸ್.ಪಿ. ರಾಮನಗರ ಇವರಿಗೆ ನೀಡಿದ ದೂರನ್ನು ಯಾವ ದಿನಾಂಕದಂದು ಸ್ವೀಕರಿಸಿರುತ್ತೀರಿ ಎಂದು ಮಾಹಿತಿ ಹಕ್ಕಿನಡಿಯಲ್ಲಿ ಕೇಳಲಾಗಿದ್ದು ಸದರಿ ಮಾಗಡಿ ಪೋಲಿಸ್ ಠಾಣೆಯವರು ದಿಃ 08-09-2025 ರಂದು ಸದರಿ ಎಸ್.ಪಿ. ರಾಮನಗರ ರವರಿಗೆ ದೂರನ್ನು ಪಡೆದಿರುತ್ತೇನೆಂದು ತಿಳಿಸಿರುತ್ತಾರೆ. ಹೀಗ್ಗೆ ಆರೋಪಿತರುಗಳು ನಾನು ದಿಃ 01-08-2025 ರಂದು ಆರೋಪಿತರುಗಳ ವಿರುದ್ದ ನೀಡಿದ್ದ ದೂರನ್ನು ವಿಲೇ ಮಾಡುವ ದುರುದ್ದೇಶದಿಂದ ಹಾಗೂ ನನ್ನ ತೇಜೋವದೆ ಮಾಡಬೇಕೆಂಬ ಉದ್ದೇಶದಿಂದ ಮಾಗಡಿ ಪೋಲಿಸ್ ಠಾಣೆಯವರೊಂದಿಗೆ ಷರೀಕ್ ಆಗಿ ದಿಃ 11-08-2025 ರ ಸಮುಚಿತ ಮಾರ್ಗದಲ್ಲಿ ಎಂಬ ತಲೆ ಬರಹದ ಅಡಿಯಲ್ಲಿ ಎಂಬ ದಾಖಲೆಯನ್ನು ಸದರಿ ಎಸ್.ಪಿ. ರಾಮನಗರ ರವರಿಗೆ ವಿಚಾರಣಾ ವರದಿಯನ್ನು ಸೃಷ್ಟಿಸಿರುತ್ತಾರೆ.  ಸದರಿ ವರದಿಯಲ್ಲಿ ಯಾವುದೇ ಉಲ್ಲೇಖವನ್ನು ನಮೂದಿಸಿರುವುದಿಲ್ಲ.  ಅದು ಕೇವಲ ಸೃಷ್ಟಿತ ದಾಖಲಾತಿ ಆಗಿದ್ದರಿಂದ ಕಾನೂನಾತ್ಮಕವಾಗಿ ನಡೆಯಬೇಕಾದ ಪ್ರಕ್ರಿಯೆಯನ್ನು ಪಾಲಿಸದೇ ದಾಖಲೆಯನ್ನು ಸೃಷ್ಟಿಸಿರುತ್ತಾರೆ.

PCR NO.334/2025
PW-1

ನಂತರ ನಾನು ಸದರಿ ಆರೋಪಿಗಳ ವಿರುದ್ದ ಸೃಷ್ಟಿತ ದಾಖಲಾತಿಗಳ ಮೇಲೆ ಕ್ರಮ ಕೈಗೊಳ್ಳುವಂತೆ ಮಾನ್ಯ ಎಸ್.ಪಿ., ಡಿ.ಜಿ.ಪಿ., ಡಿವೈಎಸ್ಪಿ ಮತ್ತು ಗೃಹ ಇಲಾಖೆಯವರಿಗೆ ದೂರನ್ನು ದಾಖಲಿಸಿರುತ್ತೇನೆ. ಸದರಿಯವರು ಯಾವುದೇ ಕ್ರಮ ಜರುಗಿಸದ ಕಾರಣ ನಾನು ಮಾನ್ಯ ನ್ಯಾಯಾಲಯಕ್ಕೆ ಈ ಪಿರ್ಯಾದಿಯನ್ನು ಸಲ್ಲಿಸಿರುತ್ತೇನೆ. ನಾನು ಮಾಗಡಿ ಪೋಲಿಸ್ ಠಾಣೆಯ ಶೈಲಜಾ ಹಾಗೂ ಆರಕ್ಷಕ ನೀರಿಕ್ಷಕರ ವಿರುದ್ದ ಕರ್ತವ್ಯ ಲೋಪದ ಆರೋಪದ ಮೇಲೆ ಮಾನ್ಯ ಎಸ್.ಪಿ ಎಸ್.ಪಿ. ರಾಮನಗರ, ಡಿ.ಜಿ.ಪಿ. ರವರಿಗೆ, ಚಿಫ್ ಸೆಕ್ರಟರಿ ಆಫ್ ಕರ್ನಾಟಕ ರವರು ಮತ್ತು ಗೃಹ ಇಲಾಖೆಯವರಿಗೆ ಸದರಿ ಮಾಗಡಿ ಪೋಲಿಸ್ ಠಾಣೆಯ ಶೈಲಜಾ ಹಾಗೂ ಆರಕ್ಷಕ ನೀರಿಕ್ಷಕರ ವಿರುದ್ದ ಪ್ರಕರಣ ದಾಖಲಿಸಲು ಅರ್ಜಿಯನ್ನು ಸಲ್ಲಿಸಿಕೊಂಡಿರುತ್ತೇನೆ. ಸದರಿ ಸೃಷ್ಟಿತ ದಾಖಲೆಯ ಮೇಲೆ ಕಾನೂನು ಬಾಹಿರವಾಗಿ ಆರಕ್ಷಕ ನೀರಿಕ್ಷಕರ ಸಹಿ ಮತ್ತು ಮೋಹರನ್ನು ಆರೋಪಿಗಳು ಸೃಷ್ಟಿ ಮಾಡಿಕೊಂಡಿರುತ್ತಾರೆ. ಆದ್ದರಿಂದ ಸದರಿ ಆರೋಪಿತರುಗಳ ವಿರುದ್ದ ಕಾನೂನು ಕ್ರಮ ಕೈಗೊಳ್ಳಬೇಕೆಂದು ಈ ಮೂಲಕ ಕೇಳಿಕೊಳ್ಳುತ್ತೇನೆ. ಸದರಿ ಸೃಷ್ಟಿತ ದಾಖಲಾತಿಯು ನನಗೆ ವಂಚಿಸುವ ಉದ್ದೇಶ, ನನ್ನ ವಕೀಲ ವೃತ್ತಿಯನ್ನು ಅವಮಾನ ಮಾಡುವ ಉದ್ದೇಶ, ನನ್ನ ತೇಜೋವದೆ ಮಾಡುವ ಉದ್ದೇಶದಿಂದ ದಾಖಲಾತಿಗಳನ್ನು ಸೃಷ್ಟಿ ಮಾಡಿಕೊಂಡಿರುತ್ತಾರೆ. ಆದ್ದರಿಂದ ಈ ದೂರಿಗೆ ಸಂಬಂಧಿಸಿದಂತೆ ನಾನು ಸೃಷ್ಟಿತ ದಾಖಲಾತಿಗಳನ್ನು ಮಾನ್ಯ ನ್ಯಾಯಾಲಯಕ್ಕೆ ಸಲ್ಲಿಸಿರುತ್ತೇನೆ. ಅದೇ ರೀತಿಯಾಗಿ ಮಾನ್ಯ ಎಸ್.ಪಿ. ರಾಮನಗರ ಇವರಿಗೆ ನೀಡಿದ ದೂರಿನ ಪ್ರತಿಗಳನ್ನು ಮಾನ್ಯ ನ್ಯಾಯಾಲಯಕ್ಕೆ ಸಲ್ಲಿಸಿರುತ್ತೇನೆ.

ದಿನಾಂಕಃ 11-08-2025 ರ ಸಮುಚಿತ ಮಾರ್ಗದಲ್ಲಿ ಎಂಬ ದಾಖಲೆಯನ್ನು ನಿಪಿ-1 ಎಂದು ಗುರುತಿಸಲಾಯಿತು. ದಿನಾಂಕಃ 06-08-2025 ರಂದು ಎಸ್.ಪಿ. ರಾಮನಗರ ನವರಿಗೆ ನೀಡಿದ ದೃಢೀಕೃತ ನಕಲಿನ ದೂರನ್ನು ನಿಪಿ-2 ಎಂದು ಗುರುತಿಸಲಾಯಿತು. ದಿನಾಂಕಃ 01-08-2025 ರಂದು ಮಾಗಡಿ ಪೋಲಿಸ್ ಠಾಣೆಗೆ ನೀಡಿದ ದೃಢೀಕೃತ ನಕಲಿನ ದೂರನ್ನು ನಿಪಿ-3 ಎಂದು ಗುರುತಿಸಲಾಯಿತು. ದೃಢೀಕೃತ ನಕಲಿನ ಹಿಂಬರಹವನ್ನು ಹಾಜರು ಪಡಿಸಿದ್ದು ನಿಪಿ-4 ಎಂದು ಗುರುತಿಸಲಾಯಿತು. ದಿನಾಂಕಃ 04-09-2025 ರಂದು ಸಹಾಯಕ ಆಡಳಿತ ಅಧಿಕಾರಿ ಮತ್ತು ಸಾರ್ವಜನಿಕ ಮಾಹಿತಿ ಅಧಿಕಾರಿಯವರು ನೀಡಿದ ಜ್ಞಾಪನ ಹಾಜರು ಪಡಿಸಿದ್ದು ನಿಪಿ-5 ಎಂದು ಗುರುತಿಸಲಾಯಿತು. ಮಾಹಿತಿ ಪತ್ರವನ್ನು ಹಾಜರು ಪಡಿಸಿದ್ದು ನಿಪಿ-6 ಎಂದು ಗುರುತಿಸಲಾಯಿತು.

PCR NO.334/2025
PW-1

ದಿಃ 22-09-2025 ರಂದು ಮಾಹಿತಿ ಹಕ್ಕಿನಡಿ ಕೋರಿರುವ ಮಾಹಿತಿಯನ್ನು ನೀಡಿದ ಬಗ್ಗೆ ಅರ್ಜಿಯನ್ನು ಹಾಜರು ಪಡಿಸಿದ್ದು ನಿಪಿ-7 ಎಂದು ಗುರುತಿಸಲಾಯಿತು. ದೃಢೀಕೃತ ನಕಲಿನ ಜ್ಞಾಪನವನ್ನು ಹಾಜರು ಪಡಿಸಿದ್ದು ನಿಪಿ-8 ಎಂದು ಗುರುತಿಸಲಾಯಿತು. ದಿನಾಂಕಃ 06-08-2025 ರಂದು ಎಸ್.ಪಿ. ರಾಮನಗರ ರವರಿಗೆ ನೀಡಿದ ದೃಢೀಕೃತ ನಕಲಿನ ದೂರನ್ನು ನಿಪಿ-9 ಎಂದು ಗುರುತಿಸಲಾಯಿತು. ಮಾನ್ಯ ಅಧೀಕ್ಷಕರು, ಪೋಲಿಸ್ ಭವನ, ಮಾನ್ಯ ಗೃಹ ಕಾರ್ಯದರ್ಶಿಗಳು, ಮಾನ್ಯ ಪೋಲಿಸ್ ಮಹಾನಿರ್ದೇಶಕರು ಮತ್ತು ಮಾನ್ಯ ಉಪ ಅಧೀಕ್ಷಕರು ಮಾಗಡಿ ಉಪ ವಿಭಾಗಧಿಕಾರಿಯವರಿಗೆ ನೀಡಿದ ದೂರಿನ ಪ್ರತಿಗಳನ್ನು ಹಾಜರು ಪಡಿಸಿದ್ದು ಕ್ರಮವಾಗಿ ನಿಪಿ-10, ನಿಪಿ-11, ನಿಪಿ-12 ಮತ್ತು ನಿಪಿ-13 ಎಂದು ಗುರುತಿಸಲಾಯಿತು.

**ಮರು ವಿಚಾರಣೆ :- ಇರುವುದಿಲ್ಲ.**

ಓ. ಹೇ. ಕೇ. ಸ. ಇ. ಎ. ಓಪ್ಪಿರುತ್ತಾರೆ,

ಪ್ರ. ನ್ಯಾ. ದಂ. ಮತ್ತು ಜೆ. ಎಂ. ಎಫ್. ಸಿ.
ಮಾಗಡಿ.